# ಧರೆಗೆ ದೊಡ್ಡವರಾರು?

ಕಲ್ಯಾಣ ಕಲ್ಯಾಣ ಕಲ್ಯಾಣ
ಕಲ್ಯಾಣ ಏನ್ ಕೊಟ್ತು?
ಬಸವಣ್ಣಪ್ಪಗ ಕೊಟ್ತು
ಬಸವಣ್ಣ ಏನ್ ಕೊಟ್ಟ?
ಅನುಭವ ಮಂಟಪ ಕೊಟ್ಟ.
ಅನುಭವ ಮಂಟಪ ಏನ್ ಕೊಟ್ತು?
ಶರಣರಿಗಿ ಕೊಟ್ತು.
ಶರಣರೇನ್ ಕೊಟ್ರು?
ನುಡಿದಂಗ್ ನಡಿ ಅಂದ್ರು.
ನಡಿದಂಗ್ ನಡದವ್ರು ಏನ್ ಆದ್ರು?
ಧರಿಮ್ಯಾಲಿನ ದೇವ್ರ ಆದ್ರು.

ಇದು ನಮ್ಮ ಕಲ್ಯಾಣ ಕರ್ನಾಟಕದ ಚುಕ್ಕೋಳ ಪದ. ಅಂದ್ರ ಮಕ್ಕಳ ಹಾಡು. ಹೇಳಿ ಕೇಳಿ ಮೊಘಲಾಯಿ ಮಂದಿ ನಾವು. ನಮ್ ಖದರೇ ಬೇರೆ. ನಮ್ಮ ಸಮಝೂಣಕಿನೇ ಬೇರೆ. ನಮ್ಮಲ್ಲಿಯ ತತ್ವಪದಗಳು, ಪುರಾಣಗಳಂತೂ ಸರಿಯೇ ಸರಿ. ಮೊಹರಂ ಪದಗಳು, ಛಲಾಯಿ ಪದಗಳು, ಹರದೇಶಿನಾಗೇಶಿ, ಬೀಗರ ಪದಗಳು, ಬಯಲಾಟಗಳು, ಡಪ್ಪಿನಾಟಗಳು ಜನಪದ ಸಾಹಿತ್ಯವಂತೂ ತೀರದ ಖಜಾನೆಯಂತಿದೆ. ಈ ಮೇಲಿನ ಚುಕ್ಕೋಳ ಪದ ಆಟದ ಪದವಾಗಿದೆ. ಫನ್, ರಿದಂ, ಆಕರ್ಷಕ ಪದಜೋಡಣೆ, ಆಟದ ಜೋಶ್, ಹುಡುಗಾಟಿಕೆಗಳು ಇರಲೇ ಬೇಕಲ್ಲವೆ? ಆಡುತ್ತ ಆಡುತ್ತ ಮಕ್ಕಳೆ ಕಟ್ಟಿದ ಪದಗಳು, ಹಿರಿಯರು ರಚಿಸಿದ ಮಕ್ಕಳ ಪದಗಳು ಯಾವುವು ಎಂಬುದನ್ನು ವಿಭಾಗಿಸಿ ಗುರುತಿಸುವುದು ಕಷ್ಟ. ಜನಪದ ರಚನೆಗಳಿಗಂತೂ ಕರ್ತೃ ಗುರುತಿಸುವುದು ಅಸಾಧ್ಯವೆ ಸರಿ. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ದೊರೆಯುವ ಈ ಚುಕ್ಕೋಳ ಪದಗಳು ವಿಚಾರ ಪ್ರಚೋದಕವೂ ಆಗಿವೆ.

12ನೇ ಶತಮಾನದಲ್ಲಿ ನಡೆದ ಶರಣ ಕ್ರಾಂತಿ ಮತ್ತು ಅದರ ಉಪಸೃಷ್ಟಿಯಾಗಿ ಮೂಡಿ ಬಂದ ವಚನ ಸಾಹಿತ್ಯ ಇವೆರಡೂ ಭಾರತೀಯ ಅನುಭಾವಿಕ ಲೋಕದಲ್ಲಿಯೇ ವಿಶಿಷ್ಟ ಚಾರಿತ್ರಿಕ ನಡೆ. ವರ್ಗ, ವರ್ಣ, ಜಾತಿ, ಲಿಂಗ ತಾರತಮ್ಯಗಳ ಮೂಲೋತ್ಪಾಟನೆಗಾಗಿ ಬಸವಣ್ಣ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಿದ್ದರು. ಮೊದಲ ಬಾರಿಗೆ ಶೋಷಿತ ಸಮುದಾಯಗಳಲ್ಲಿ ಸ್ವಾಭಿಮಾನ ಜಾಗೃತಗೊಳಿಸಿದ್ದರು. ಧ್ವನಿಯಿಲ್ಲದ ಶೋಷಿತ ಸಮುದಾಯಗಳು ಸಾತ್ವಿಕ ಛಲದಿಂದ ದಂಗೆ ಏಳುವಂತೆ ಮಾಡಿದ್ದರು. ಶರಣರು ಏಕ ಕಾಲಕ್ಕೆ ರಾಜ್ಯಸತ್ತೆ, ಪುರೋಹಿತಶಾಹಿ ವಿರುದ್ಧ ಅನುಭಾವಿಕ ದಂಗೆ ಸಾರಿದ್ದರು. ಕ್ರಾಂತಿಯ ನೇತಾರನಾಗಿದ್ದ ಬಸವಣ್ಣನವರಿಗೆ ಗಡಿಪಾರು ಶಿಕ್ಷೆ, ಶರಣರ ಕಗ್ಗೊಲೆ ಇವೆಲ್ಲವೂ ಸಂಭವಿಸಿ 2–3 ನೂರು ವರ್ಷಗಳವರೆಗೆ ಶರಣಕ್ರಾಂತಿಯ ಕುರಿತು ಉಸಿರೆತ್ತದ ಸ್ಥಿತಿ ನಿರ್ಮಾಣವಾಗಿತ್ತು. ಈ ಕಾಯಕಜೀವಿಗಳ ಚಾರಿತ್ರಿಕ ಕ್ರಾಂತಿಯೊಂದು ತನ್ನಲ್ಲಿ ಗರ್ಭೀಕರಿಸಿಕೊಂಡಿದ್ದ ಜೀವಪರತೆಯಿಂದಾಗಿ ಪುರೋಹಿತಶಾಹಿಗಳ ಕಣ್ಣ ಕೀಸರಾಗಿತ್ತು. ಶರಣಕ್ರಾಂತಿಯು ಯಾವುದೇ ಶಾಸನ, ಕಾವ್ಯಗಳಲ್ಲಿ ಉಲ್ಲೇಖಿತವಾಗಲಿಲ್ಲ. ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಜನಪದರು ಕುಗ್ಗಲಿಲ್ಲ. ಶರಣಕ್ರಾಂತಿಯ ಸ್ಮೃತಿಗಳನ್ನು ಪರಂಪರಾಗತವಾಗಿ ಹಾಡುಗಳಲ್ಲಿ ಹೊಸೆದು ಬಂದರು. ಇಂಥ ರಚನೆಗಳ ಪೈಕಿ ಈ ಚುಕ್ಕೋಳ ಪದ ಕೆಲವೇ ಸಾಲಿನಲ್ಲಿ ಶರಣ ದರ್ಶನವನ್ನು ಕಟ್ಟಿ ಕೊಡುತ್ತದೆ. ಕಲ್ಯಾಣದಲ್ಲಿ ಬಸವಣ್ಣನೊಂದಿಗೆ ಅಣಿ ನೆರೆದಿದ್ದ ಮಾದಾರ ಚೆನ್ನಯ್ಯ, ಡೋಹಾರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ, ಸೂಳೆ ಸಂಕವ್ವೆ, ಬೊಂತಾದೇವಿ, ಕಾಳವ್ವೆ ಮುಂತಾಗಿ 770 ಅಮರಗಣಂಗಳು. ದುಡಿಯುವ ಸಮುದಾಯದಿಂದ ಬಂದ ಇವರು ಆಧ್ಯಾತ್ಮಿಕ ದಂಗೆಗಿಳಿದು ಪಾರಮಾರ್ಥದ ನಿಜದ ನೆಲೆಯನ್ನು ತೆರೆದು ತೋರಿದ್ದರು.

ಚುಕ್ಕೋಳ ಪದ. ಅರ್ಥ ಸಾಧ್ಯತೆ ದೊಡ್ಡದು. ಚಾರಿತ್ರಿಕ ಮಹತ್ವವಂತೂ ಅಸದಳ. ಸಮಸಮಾಜ ನಿರ್ಮಾಣಕ್ಕಾಗಿ ಅಸಂಖ್ಯಾತ ದುಡಿಯುವ ಜನರು ಅಣಿನೆರೆಸಿದ್ದ ಕ್ರಾಂತಿ ಕೆಂಡದ ಹೊಳಹನ್ನು ಇದು ದಿಗ್ದರ್ಶಿಸುತ್ತದೆ. ಕಲ್ಯಾಣ ಒಂದು ಊರು ಮಾತ್ರವಲ್ಲ. ಕಾಯಕಕ್ಕೂ ಸಂಕೇತ. ಬಸವಣ್ಣನವರ ನೇತೃತ್ವದಲ್ಲಿ ಅಸಂಖ್ಯಾತ ಕಾಯಕ ಜೀವಿಗಳು ಸೇರಿ 'ಸಮತೆಯೆಂಬುದೇ ಯೋಗ ನೋಡಾ', 'ಅರಿವೆ ಗುರು', 'ಕಾಯಕವೇ ಕೈಲಾಸ', 'ದೇಹವೇ ದೇಗುಲ' ಮುಂತಾಗಿ ಹೇಳಿದರು.

ಬಸವ ಕಲ್ಯಾಣವೇ ಮುಂದೆ ನೂರೊಂದು ವಿರಕ್ತರ ಕಾಲದಲ್ಲಿ ಅಂದರೆ ಹರಿಹರ, ಚಾಮರಸ, ಕೆರೆಯ ಪದ್ಮರಸರ ಕಾಲದ ಪ್ರೌಢದೇವರಾಯನ ಆಳ್ವಿಕೆಯಲ್ಲಿ ಹಂಪಿಯು ವಿಜಯ ಕಲ್ಯಾಣ ಎಂದು ಕರೆಸಿಕೊಂಡರೆ ಅದೇ ತತ್ವಗಳ ಮುಂದುವರೆದ ರೂಪವಾಗಿ ಕೊಡೆಕಲ್ಲ ಬಸವಣ್ಣನ ಅನುಭಾವಿ ಪಂಥದಲ್ಲಿ ಕಡೆಯಕಲ್ಯಾಣ ಎಂದು ಎನಿಸಿಕೊಂಡಿತು.

ಮಂಟೇಸ್ವಾಮಿ ಕಾವ್ಯದಲ್ಲಿ ಕಲ್ಯಾಣದ ಸಾಲುಗಳ ಕಥನವೂ ತತ್ವಕ್ಕೆ ಸಂದ ಗೌರವವಾಗಿದೆ. ತತ್ವಪದಕಾರರ ಪ್ರಯೋಗ ಭೂಮಿ ಕಡಕೋಳವು ತತ್ವಕಲ್ಯಾಣವೆಂದು ಕರೆಸಿಕೊಂಡಿತು. ಕಾಲಕಾಲಕ್ಕೂ ಕಲ್ಯಾಣ ಮತ್ತೆ ಮತ್ತೆ ಅನುರಣಿಸುತ್ತಲೆ ಇದೆ. ಜನಪದರ ಪ್ರಕಾರ 12ನೇ ಶತಮಾನದ ಶಿವಶರಣರು ನುಡಿದಂತೆ ನಡೆದು, ನುಡಿಗಾಗಿ ಪ್ರಾಣವನ್ನೇ ಒತ್ತೆಯಿಟ್ಟಿದ್ದರು ಆದ್ದರಿಂದಲೇ ಅವರು ಈ ಧರೆಯ ಮೇಲಿನ ದೇವರಾಗಿ ಉಳಿದಿದ್ದಾರೆ. ಧರೆ ಎಂದರೆ ಭೂಮಿಯೂ ಹೌದು. ಬೀದರಿನ ಕೆಂಪು ಹೌದು. ನೆಲಕ್ಕೆ ಧರಿನಾಡು ಎಂದೇ ಕರೆಯಲಾಗುತ್ತದೆ.

ಇಲ್ಲಿನ ಜನಪದರು, ಮಲ್ಲಿಗಿ ಇರಲಾಕ ಮುಳ್ಯಾಕ ಮುಡಿಯುತೀ ಕಲ್ಯಾಣದ ಬಸವಣ್ಣ ಇರಲಿಕ್ಕಾಗಿ ಕಲ್ಲಿಗ್ಯಾಕ ಕೈ ಮುಗಿಯಿತೀ|| ಎನ್ನುತ್ತಾರೆ. ನುಡಿದಂತೆ ನಡೆವುದೇ ಧರ್ಮವಾಗಲಿ.

■ **ಮೀನಾಕ್ಷಿ ಬಾಳಿ**

## ಮಾತೇ ಮುತ್ತು

- ದುಃಖಕ್ಕೆ ಸಿಕ್ಕಷ್ಟು ಬೇಗ ಕಾರಣ ಸುಖಕ್ಕೆ ಸಿಗುವುದಿಲ್ಲ.
  —ಪಿ. ಲಂಕೇಶ್
- ಬಂದ ಸುಖವ ಬಿಡಬೇಡ, ಬಾರದುದು ಬೇಕೆಂದು ಬಯಸಬೇಡ.
  —ರತ್ನಾಕರವರ್ಣಿ
- ಸಂತೋಷದ ಒಂದು ಬಾಗಿಲು ಮುಚ್ಚಿದಾಗ ಮತ್ತೊಂದು ಬಾಗಿಲು ತೆರೆಯುತ್ತದೆ. ಆದರೆ ನಾವು ಎಲ್ಲಿಯವರೆಗೂ ಮುಚ್ಚಿದ ಬಾಗಿಲಿನ ಕಡೆಗೆ ನೋಡುತ್ತಿರುತ್ತೇವೆಯೋ ಅಲ್ಲಿ ತನಕ ನಮಗಾಗಿ ತೆರೆದ ಇನ್ನೊಂದು ಬಾಗಿಲು ಕಾಣಿಸುವುದಿಲ್ಲ.
  —ಹೆಲೆನ್ ಕೆಲರ್
- ದುಡಿ, ಮೈ ಮುರಿದು ದುಡಿ, ಹೆಚ್ಚು ಹೆಚ್ಚಾಗಿ ದುಡಿ, ಆ ನಿನ್ನ ದುಡಿಮೆಯಲ್ಲಿ ಶ್ರಮವಿರಲಿ. ನಿಯಮವಿರಲಿ, ಗುರಿ ಇರಲಿ, ವಿವೇಚನೆ ಇರಲಿ, ದಕ್ಷತೆ ಇರಲಿ.
  —ಎಂ. ವಿಶ್ವೇಶ್ವರಯ್ಯ
- ಅಪವಾದಗಳಿಗೆ ಅತ್ಯುತ್ತಮ ಉತ್ತರ ಮೌನ.
  —ಬೆನ್ ಜಾನ್ಸನ್
- ಜೀವನವೆಂಬುದು ಸೈಕಲ್ ಸವಾರಿ ಇದ್ದಂತೆ. ಸಮತೋಲನ ಇರಬೇಕೆಂದರೆ ಚಲಿಸುತ್ತಲೇ ಇರಬೇಕು!
  — ಐನ್‌ಸ್ಟೀನ್
- ಸೋತವನಿಗೆ ಮಾತ್ರ ಗೆಲ್ಲಲು ಮತ್ತೊಂದು ಅವಕಾಶ ಇರುತ್ತದೆ.
  —ದ.ರಾ. ಬೇಂದ್ರೆ
- ಜೀವನ ಸಾರ್ಥಕವಾಗುವುದು ಎಷ್ಟು ಸುಖ ಸಂತೋಷದಿಂದ ಇದ್ದೇವೆ ಎಂಬುವುದರಿಂದ ಅಲ್ಲ. ನಮ್ಮಿಂದ ಎಷ್ಟು ಜನ ಸುಖ, ಶಾಂತಿ, ಸಂತೋಷದಿಂದ ಇದ್ದಾರೆ ಎಂಬುವುದರಿಂದ.
  —ಅಂಬೇಡ್ಕರ್
- ಒಳ್ಳೆಯದನ್ನು ಮಾಡಿದರೆ ಸಾಲದು, ಅದನ್ನು ಒಳ್ಳೆಯ ರೀತಿಯಿಂದ ಮಾಡಬೇಕು.
  —ಚಾಣಕ್ಯ
- ನೀವು ಬೇರೆಯವರಿಗಾಗಿ ಒಂದು ದೀಪ ಹಚ್ಚಿ. ಅದು ನಿಮ್ಮ ದಾರಿಗೂ ಬೆಳಕಾಗುತ್ತದೆ.
  —ಗೌತಮ ಬುದ್ಧ
- ಎಷ್ಟು ಗಟ್ಟಿ ಮನುಷ್ಯನೇ ಇರಲಿ, ಹೊಗಳಿಕೆಗೆ ಕಿವಿಗೊಟ್ಟನೆಂದರೆ ಬಲೆಗೆ ಬೀಳುತ್ತಾನೆ.
  —ಶಿವರಾಮ ಕಾರಂತ
- ಮನುಷ್ಯನನ್ನು ಕಡೆಗಣಿಸಿ ಮಾಡಿದ ಯಾವುದೇ ಸತ್ಕರ್ಮ ನಿರರ್ಥಕ.
  —ಕೆ.ಎಸ್. ನಿಸಾರ್ ಅಹಮದ್